


ಎಡದಿಂದ ಬಲಕ್ಕೆ

1. ಈ ಅವಲೋಕನದ ವಿಷಯ ಭೂಮ್ಯೇತರ ಪ್ರಪಂಚ (4)
3. ಸತತವಾಗಿ ಬೆಳೆಯುತ್ತಲೇ ಇದೆ ವಂಶ (3)
7. ಒಂದೇ ಕೋರೆಹಲ್ಲಿನ ಪ್ರಸಿದ್ಧ ದೇವ (4)
8. ಹಾರವಿದ್ದರೇನು? ಅಗಲಿಕೆ ಬಿಟ್ಟಿಲ್ಲ (3)
9. ರಹದಾರಿ ಪಡೆದೂ ಮಾರ್ಗ ತಪ್ಪಿದ್ದು ಭಾರೀ ಸೋಜಿಗ (2)
12. ರಾಂಚಿಯಲ್ಲಿ ಸಿಕ್ಕಿದ್ದು ನಾಲಿಗೆಗಷ್ಟೇ ವೇದ್ಯ (2)
14. ಪರಿಭವವನ್ನು ತಪ್ಪಿಸಿದ್ದು ಆತನ ವರ್ಚಸ್ಸು (3)
15. ಕಲಹವೋ ಕಲಹ. ಒಟ್ಟಾರೆ ಭಾರೀ ಗದ್ದಲ (4)
17. ಬುದ್ಧಿವಂತೆ ಹೌದು. ಕೆಲಸದಲ್ಲಿ ದೃಢತೆಯೂ ಇದೆ (3)
18. ಹಗ್ಗ ತಂದವನ ಜೊತೆ ದ್ವೇಷ, ವೈರತ್ವ (4)

ಮೇಲಿಂದ ಕೆಳಕ್ಕೆ

1. ಕಾರಣ ಏನೇ ಇರಲಿ, ಆಕೆ ಅತ್ತಿದ್ದಂತೂ ವಿಪರೀತವಾಯಿತು (2)
2. ಲಕ ಲಕ ಹೊಳೆಯುತ್ತ ತೂಗಾಡುವುದೆಂದರೆ? (3)
4. ಹಳ್ಳ ತೆಗೆದಿದ್ದಲ್ಲೇ ಅಡಿಪಾಯ ಹಾಕಿದರಲ್ಲ? (4)
5. ಆತುರದಲ್ಲೂ ಬಹಳ ವ್ಯತ್ಯಾಸ ಇದೆ (3)
6. ಸಾವನ್ನಪ್ಪಿದ ವೀರರ ಸಂಖ್ಯೆ ನೂರಾರಕ್ಕಿಂತ ಹತ್ತು ಮಡಿ (4)
10. ಹೊಲ ಮಾರುತ್ತಿರುವವರು ಒಬ್ಬರಿಬ್ಬರಲ್ಲ (4)
11. ಅಲ್ಲಿನ ಪ್ರಸಾದ. ಬಹಳ ವಿಖ್ಯಾತ (4)
13. ಕಚೇರಿಯ ಕಾಫಿಯಲ್ಲಿ ಇದೇನು ಬೆರಕೆ? (3)
16. ಹಾಳಾಗಲು ಬಿಡಬೇಡಿ–ಫಲಕ (3)
17. ಬಂದೀಖಾನೆಯಲ್ಲೊಂದು ಪುಟ್ಟ ಕಾಡು (2)

## ಪದಬಂಧ : 10-12-2009ರ ಉತ್ತರಗಳು

ಎಡದಿಂದ ಬಲಕ್ಕೆ

1–ಅನುಕಂಪ; 3–ಗದರು; 4–ಹಜಾರ; 6–ಅವನತಿ; 8–ನಮಸ್ಕಾರ; 10–ನವಬಲ; 12–ಸದಾನಂದ; 16–ಗೆಲುವು; 17–ಬಡವ; 18–ಗೆಣೆಕಾರ.

ಮೇಲಿಂದ ಕೆಳಕ್ಕೆ

1–ಅರುಹು; 2–ಪಹರೆ; 3–ಗಹನ; 5–ರಹೀಮ; 6–ಅನುಮಾನ; 7–ತಿಲತೈಲ; 8–ನವಮಾಸ; 9–ರಜಾಕಾಲ; 11–ಬಡಿಗೆ; 13–ದಾನವ; 14–ಹಾವುಗೆ; 15–ಅಂಬರ.

# ವಾಸ್ತು ವಿಸ್ಮಯ

## ‘ಗಗನ ಚುಂಬಿ’–ಎಷ್ಟೆಷ್ಟು ಎತ್ತರ?

ಗಗನ ಚುಂಬಿ ಕಟ್ಟಡಗಳು–ಅವೇ ಇಂದಿನ ಮಹಾನಗರಗಳ ಆದ್ಯ ಲಕ್ಷಣ ಹೌದಲ್ಲ? ಮುಗಿಲಿನೆತ್ತರಕ್ಕೆ ನಿಂತ ಗೋಪುರಗಳು, ಬಹುಮಹಡಿ ವಾಣಿಜ್ಯ– ವಸತಿ– ಆಸ್ಪತ್ರೆ ಸಮುಚ್ಚಯಗಳು ಇಲ್ಲದ ಸಾಧಾರಣ ನಗರಗಳೂ ಈಗ ಅಪರೂಪ ಅಲ್ಲವೇ? ಅಷ್ಟೇ ಏಕೆ? ಗಗನ ಚುಂಬಿಗಳು ದಿನೇ ದಿನೇ ಅಧಿಕವಾಗುತ್ತಿವೆ; ಹೆಚ್ಚು ಹೆಚ್ಚು ಎತ್ತರಕ್ಕೇರುತ್ತಿವೆ; ಔನ್ನತ್ಯದ ಹೊಸ ಹೊಸ ದಾಖಲೆಗಳನ್ನು ಸೃಜಿಸುತ್ತಿವೆ.

ಪ್ರಪಂಚದ ಪ್ರಪ್ರಥಮ ಗಗನ ಚುಂಬಿ ನಿರ್ಮಾಣವಾದದ್ದು 1884–85 ರಲ್ಲಿ. ಯು.ಎಸ್.ಎ.ಯ ಶಿಕಾಗೋದಲ್ಲಿ ನಿರ್ಮಾಣಗೊಂಡ ಆ ಗೋಪುರದ ಎತ್ತರ 171 ಅಡಿ. ಹತ್ತು ಮಹಡಿಗಳಿದ್ದ ಆ ವಾಸ್ತು ನಿರ್ಮಿತಿ ಅಂದಿನ ಎಲ್ಲರನ್ನೂ ಬೆರಗಾಗಿಸಿತ್ತು. ಪ್ರಸ್ತುತ ಈ ಎತ್ತರ ಯಾರ ಗಮನವನ್ನೂ ಸೆಳೆಯುವುದೂ ಇಲ್ಲ. ಈಗಿನ ಜಗದ ವಿಖ್ಯಾತ ಗಗನ ಚುಂಬಿಗಳನ್ನೂ ಅವುಗಳ ಔನ್ನತ್ಯಗಳನ್ನೂ ನೀವೇ ಗಮನಿಸಿ:



★ ಐಫೆಲ್ ಗೋಪುರ: ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿರುವ ಈ ಗೋಪುರದ ಎತ್ತರ 984 ಅಡಿ.

★ಸೆಂಟರ್ ಪಾಯಿಂಟ್ ಟವರ್: ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ ಗಗನ ಚುಂಬಿ. ಎತ್ತರ 1000 ಅಡಿ.

★ಜಾನ್ ಹಾನ್‌ಕಾಕ್ ಸೆಂಟರ್: ಯು.ಎಸ್.ಎ.ಯ ಶಿಕಾಗೋದಲ್ಲಿದೆ. ಎತ್ತರ 1127 ಅಡಿ.

★ಎಂಪೈರ್ ಸ್ಟೇಟ್ ಬಿಲ್ಡಿಂಗ್: ಯು.ಎಸ್.ಎ.ಯ ನ್ಯೂಯಾರ್ಕ್‌ನಲ್ಲಿದೆ. ಎತ್ತರ 1250 ಅಡಿ.

★ವರ್ಲ್ಡ್ ಟ್ರೇಡ್ ಸೆಂಟರ್: ಚಿತ್ರದಲ್ಲಿರುವ ಅತ್ಯುನ್ನತ ಅವಳಿ ಕಟ್ಟಡ. ಭಯೋತ್ಪಾದಕರ ದಾಳಿಗೆ 9/11 ರಂದು ತುತ್ತಾದ ಈ ಕಟ್ಟಡ ಇದ್ದದ್ದೂ ನ್ಯೂಯಾರ್ಕ್‌ನಲ್ಲೇ. ಎತ್ತರ: 1350 ಅಡಿ.

★ ಸಿಯರ್ಸ್ ಟವರ್ಸ್: ಶಿಕಾಗೋದಲ್ಲಿರುವ ಇನ್ನೊಂದು ಗಗನ ಚುಂಬಿ. ಎತ್ತರ 1454 ಅಡಿ.

★ಸಿ.ಎನ್. ಟವರ್: ಕೆನಡದ ಟೊರಾಂಟೋದಲ್ಲಿದೆ. ಸಿಯರ್ಸ್ ಟವರ್ಸ್‌ಗಿಂತ ಕೊಂಚ ಉನ್ನತ.

★ಪೆಟ್ರೋನಾಸ್ ಟವರ್ಸ್: ಮಲೇಶಿಯಾದ ಕ್ವಾಲಾಲಂಪುರದಲ್ಲಿದೆ. ಎತ್ತರ 1483 ಅಡಿ.

★ ತೈಪೆ–101: ತೈವಾನ್‌ನ ತೈಪೆಯಲ್ಲಿದೆ. ಎತ್ತರ 1671 ಅಡಿ. ಸದ್ಯದ ಅತ್ಯುನ್ನತ ಕಟ್ಟಡ.

ತೈಪೆ–101ರ ವಿಶ್ವ ದಾಖಲೆ ಸದ್ಯದಲ್ಲೇ ಹಿಂದೆ ಬೀಳಲಿದೆ. ಭಗ್ನವಾದ ವರ್ಲ್ಡ್ ಟ್ರೇಡ್ ಸೆಂಟರ್‌ನ ಸ್ಥಳದಲ್ಲೇ ನಿರ್ಮಿಸಲಾರಂಭಿಸಿರುವ ‘ಫ್ರೀಡಂ ಟವರ್’ 1776 ಅಡಿ ಎತ್ತರ ಮುಟ್ಟಲಿದೆ. 2011 ರಲ್ಲಿ ಅದರ ನಿರ್ಮಾಣ ಪೂರ್ಣಗೊಳ್ಳಲಿದೆ.

■ ಎನ್. ವಾಸುದೇವ್